## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 11.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ.ಆರ್ ಆರ್ ಎನ್ ವಕೀಲರಿಂದಃ**

ಅಪಘಾತ ದಿಃ 28/03/2023 ರಂದು ಜೋಯಿಡಾದಿಂದ ದಾಂಡೇಲಿ ಬರುವಾಗ ನಾಗೋಡಾ ಕ್ರಾಸ್ ಹತ್ತಿರ ಆಗಿರುತ್ತದೆ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಅಪಘಾತ ಈ ರೀತಿ ಆಗಿದೆ ಎಂದು ಅಪಘಾತ ಸ್ಥಳದಲ್ಲಿ ಹಾಜರಿದ್ದ ನಿಂಗಯ್ಯ ಪೂಜಾರಿ ಇವರು ನನಗೆ ಹೇಳಿರುತ್ತಾರೆ. ಸದರಿಯವರು ನನ್ನ ಸಂಬಂಧಿಕರಲ್ಲ ಆದರೆ ಪರಿಚಯಸ್ಥರು. ಪಿರ್ಯಾದಿಯನ್ನು ಯಾರು ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿಯವರು ಅಪಘಾತವನ್ನು ಕಣ್ಣಾರೆ ನೋಡಿರುತ್ತಾರೆ. ಈ ಪ್ರಕರಣದಲ್ಲಿ ಸದರಿ ನಿಂಗಯ್ಯ ಪೂಜಾರಿ ಇವರ ಸಾಕ್ಷಿ ಮಾಡಿಸುತ್ತಿರಾ ಎಂದರೆ ಸಾಕ್ಷಿ ಮಾಡಿಸುತ್ತೇನೆಂದು ನುಡಿಯುತ್ತಾರೆ. ಸದರಿ ನಿಂಗಯ್ಯ ಪೂಜಾರಿ ಇವರು ಚಾಲಕರಾಗಿರುತ್ತಾರೆ. ಅವರು ಅಪಘಾತ ಸ್ಥಳದಿಂದ ಹೋಗುವಾಗ ಅಪಘಾತವನ್ನು ನೋಡಿರುತ್ತಾರೆಂದು ಹೇಳಿರುತ್ತಾರೆ ಅಪಘಾತವಾದ ಸಮಯದಲ್ಲಿ ಅವರು ಅಲ್ಲಿ ಇದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಹೊರಟಿದ್ದ ವಾಹನದ ಕೊನೆಯ ಸಂಖ್ಯೆ 4666 ಆಗಿರುತ್ತದೆ. ಪೂರ್ತಿ ಸಂಖ್ಯೆ ಗೊತ್ತಿಲ್ಲ. ಸದರಿ ವಾಹನವನ್ನು ಖರೀದಿಸಿ 5-6 ವರ್ಷ ಆಗಿರಬಹುದು ನನಗೆ ನಿಖರವಾಗಿ ಗೊತ್ತಿಲ್ಲ. ನಾನು ಹುಬ್ಬಳ್ಳಿಯಲ್ಲಿ ಇರುತ್ತಿದ್ದ ಕಾರಣ ನನಗೆ ಅದರ ಸಂಖ್ಯೆ ಗೊತ್ತಿಲ್ಲ.

2. ನನ್ನ ತಾಯಿಯನ್ನು ಅಪಘಾತವಾದ ದಿನವೇ ಎಸ್ ಡಿ ಎಂ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ನ್ಯಾಯಾಲಯದಲ್ಲಿ ಹಾಜರಪಡಿಸಿದ ದಾಖಲೆಗಳನ್ನು

ನೋಡಿರುತ್ತೇನೆ ಹಾಗೂ ಅವುಗಳು ಸರಿಯಾಗಿವೆ. ದಾಖಲೆಗಳ ಪ್ರಕಾರ ನನ್ನ ತಾಯಿಯನ್ನು ಮೊದಲು ಜೋಯಿಡಾ ಆಸ್ಪತ್ರೆಗೆ ಅಲ್ಲಿಂದ ಎಸ್ ಡಿ ಎಂ ಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಜೋಯಿಡಾ ಆಸ್ಪತ್ರೆಯವರು ನೀಡಿದ ಗಾಯದ ಪ್ರಮಾಣಪತ್ರವನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ಅದನ್ನು ಇಲ್ಲಿ ಹಾಜರಪಡಿಸಬಹುದಾ ಎಂದರೆ ಸಾಕ್ಷಿ ಹಾಜರಪಡಿಸುತ್ತೇನೆಂದು ನುಡಿಯುತ್ತಾರೆ. ಪೊಲೀಸರಿಗೆ ಪಿರ್ಯಾದಿಯನ್ನು ಯಾವ ದಿನಾಂಕದಂದು ಹಾಗೂ ಯಾರು ನೀಡಿರುತ್ತಾರೆಂದು ನನಗೆ ಗೊತ್ತಿಲ್ಲ. ಅಪಘಾತವಾದ ನಂತರ ನನ್ನ ತಾಯಿಯನ್ನು ಅಲ್ಲಿ ಸೇರಿದ ಜನರೇ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಆದರೆ ಅವರು ಯಾರು ಎಂದು ಗೊತ್ತಿಲ್ಲ.

3. ಅಪಘಾತ ದಿಃ28/03/2023 ರಂದು ಆದರೂ ಸಹ ದಿಃ20/04/2023 ರಂದು ಪಿರ್ಯಾದಿ ಏಕೆ ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ಆಸ್ಪತ್ರೆಯಲ್ಲಿದ್ದ ಕಾರಣ ತಡವಾಗಿ ಪಿರ್ಯಾದಿ ಸಲ್ಲಿಸಿರುತ್ತೇವೆಂದು ನುಡಿಯುತ್ತಾರೆ. ಆಸ್ಪತ್ರೆಯಲ್ಲಿ ನಮ್ಮ ತಾಯಿಯ ಜೊತೆ ನಾನು ಮತ್ತು ನನ್ನ ಅಜ್ಜ ಇದ್ದೇವು. ಆಸ್ಪತ್ರೆಯಲ್ಲಿದ್ದ ನಾವು ಯಾರೂ ಸಹ ಪಿರ್ಯಾದಿ ಸಲ್ಲಿಸಿರುವುದಿಲ್ಲ. ಪಿರ್ಯಾದಿದಾರರು ಆಸ್ಪತ್ರೆಯಲ್ಲಿ ಇರಲಿಲ್ಲ ಹಾಗಾಗಿ ಅವರಿಗೆ ಅಪಘಾತವಾದ 24 ಗಂಟೆಗಳ ಅವಧಿಯಲ್ಲಿ ಪಿರ್ಯಾದಿ ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಂಗಯ್ಯ ಬಸಯ್ಯ ಪೂಜಾರಿ ನನ್ನ ತಂದೆಯ ಸಹೋದರರು ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ರೀತಿ ಅಪಘಾತ ಆಗಿಯೇ ಇಲ್ಲ ಹಾಗೂ 20 ದಿನಗಳವರೆಗೆ ಕಾಯ್ದು ಎಲ್ಲರ ಹತ್ತಿರ ವಿಚಾರ ಮಾಡಿ ಯಾವ ರೀತಿ ಕೇಸ್ ಮಾಡಬೇಕೆಂದು ವಿಚಾರ ಮಾಡಿ ಪಿರ್ಯಾದಿ ನೀಡಿದ ಕಾರಣ ತಡವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವಾಗುವ ಮುಂಚೆಯಿಂದ ನನ್ನ ತಂದೆ ಹಾಗೂ ನಾವು ಬೇರೆ ಬೇರೆಯಾಗಿ ವಾಸವಿದ್ದೇವೆ. ನಮ್ಮ ತಂದೆ

ಮತ್ತು ತಾಯಿ ಒಟ್ಟಿಗೆ ವಾಸವಿದ್ದಾರೆ ಹಾಗೂ ನಾವು ಇಬ್ಬರು ಮಕ್ಕಳು ಬೇರೆ ಕಡೆ ವಾಸವಿದ್ದೇವೆ. ನಮ್ಮ ಕುಟುಂಬದ ಸದಸ್ಯರ ಮಧ್ಯ ಯಾವುದೇ ಭಿನ್ನಾಪ್ರಾಯ ಇರುವುದಿಲ್ಲ. ನನ್ನ ಹಾಗೂ ನನ್ನ ತಂದೆಯ ಸಂಬಂಧ ಚೆನ್ನಾಗಿದೆ.

4. ನನ್ನ ತಂದೆಯ ವಿರುದ್ಧ ಸಲ್ಲಿಸಿದ ಸಿಸಿ ಪ್ರಕರಣದಲ್ಲಿ ಅವರ ಸಾಕ್ಷಿಯಾಗಿದೆ ಅಥವಾ ಇಲ್ಲವೆಂದು ನನಗೆ ಗೊತ್ತಿಲ್ಲ. ನನ್ನ ತಾಯಿಗೆ ಸಂಪೂರ್ಣ ಚಿಕಿತ್ಸೆ ಎಸ್ ಡಿ ಎಂ ಆಸ್ಪತ್ರೆಯಲ್ಲಿ ಆಗಿರುತ್ತದೆ. ನನ್ನ ತಾಯಿ ದಿಃ18/03/2023 ರಿಂದ 22/04/2023 ರವರೆಗೆ ಒಳರೋಗಿಯಾಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಅವರು ಆಸ್ಪತ್ರೆಯಿಂದ ಬಿಡುಗಡೆಯಾಗುವಾಗ ಜೀವಂತವಿದ್ದರು ಎಂದರೆ ಸಾಕ್ಷಿ ಇಲ್ಲ ಅವರು ದಿಃ 22/04/2023 ರಂದು ಆಸ್ಪತ್ರೆಯಲ್ಲಿಯೇ ತೀರಿಕೊಂಡಿರುತ್ತಾರೆ. ಅಪಘಾತವಾದ ನಂತರ ನನ್ನ ತಾಯಿಯನ್ನು ಕಿಮ್ಸ ಆಸ್ಪತ್ರೆ ಹುಬ್ಬಳ್ಳಿಗೆ ಕರೆದುಕೊಂಡು ಹೋಗಿ ಚಿಕಿತ್ಸೆ ನೀಡಿಲ್ಲ. ನೀವು ಕಿಮ್ಸನಲ್ಲಿ ನಿಮ್ಮ ತಾಯಿಗೆ ಯಾವುದೇ ಚಿಕಿತ್ಸೆ ಕೊಡಿಸಿಲ್ಲ ಆದರೂ ಅಲ್ಲಿಂದ ನಿಪಿ.8 ದಾಖಲೆ ಪಡೆದುಕೊಂಡಿರುತ್ತಿರಿ ಎಂದರೆ ಸಾಕ್ಷಿ ಅಲ್ಲಿ ನನ್ನ ತಾಯಿ ಚಿಕಿತ್ಸೆ ಪಡೆದಿಲ್ಲ ಹಾಗೂ ನಿಪಿ.8 ಸುಳ್ಳು ದಾಖಲೆ ಎಂದು ನುಡಿಯುತ್ತಾರೆ.

5. ಉಳವಿಯಲ್ಲಿ ನನ್ನ ತಾಯಿ ಟೇಲರಿಂಗ್ ಕೆಲಸ ಮಾಡುತ್ತಿದ್ದರು. ಸದರಿ ಕೆಲಸದಿಂದ ಅವರು ಪ್ರತಿತಿಂಗಳಿಗೆ 40 ಸಾವಿರ ಗಳಿಸುತ್ತಿದ್ದರು. ನನ್ನ ತಾಯಿ ಆದಾಯ ತೆರಿಗೆ ಪಾವತಿಸಿರುತ್ತಾರೆ ಅಥವಾ ಇಲ್ಲವೆಂದು ನನಗೆ ಗೊತ್ತಿಲ್ಲ. ಹಾಗಿದ್ದರೆ ಅವರಿಗೆ 40 ಸಾವಿರ ಆದಾಯ ಎಂದು ನಿಮಗೆ ಹೇಗೆ ಗೊತ್ತು ಎಂದರೆ ಸಾಕ್ಷಿ ಅವರು ನನಗೆ ಹೇಳಿದ್ದರು ಎಂದು ನುಡಿಯುತ್ತಾರೆ. ಉಳವಿಯಲ್ಲಿ ನನ್ನ ತಾಯಿ ಟೇಲರಿಂಗ್ ಕೆಲಸ ಮಾಡುತ್ತಿದ್ದರು ಮತ್ತು ಸದರಿ ಕೆಲಸದಿಂದ ಅವರು ಪ್ರತಿತಿಂಗಳಿಗೆ 40 ಸಾವಿರ ಗಳಿಸುತ್ತಿದ್ದರು ಎಂದು ತೋರಿಸಲು

ಯಾವುದೇ ದಾಖಲೆ ಹಾಜರಪಡಿಸಿಲ್ಲ ಅದರೆ ಟೇಲರಿಂಗ್ ಸರ್ಟಿಫಿಕೇಟ್ ಹಾಜರಪಡಿಸಿರುತ್ತೇನೆ. ನನ್ನ ತಾಯಿಗೆ ಯಾವುದೇ ಆದಾಯ ಇರಲಿಲ್ಲ ಹಾಗಾಗಿ ಅದರ ಬಗ್ಗೆ ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ವೈದ್ಯಕೀಯ ವೆಚ್ಚ ಮತ್ತು ಅಂತಿಮ ಕ್ರಿಯೆಗೆ 9 ಲಕ್ಷ ಖರ್ಚು ಮಾಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರ ನಂ.2 ಕಂಪನಿಯವರು ಮಾಡಿದ ತನಿಖಾ ವರದಿ ಪ್ರಕಾರ ನಾನು ಹಾಜರಪಡಿಸಿದ ವೈದ್ಯಕೀಯ ಬಿಲ್ ಗಳ ಬಗ್ಗೆ 5,38,489/- ರೂ. ಮೊತ್ತದ ಬಿಲ್ ಗಳು ಮಾತ್ರ ಸರಿಯಾಗಿವೆ ಎಂದರೆ ಸರಿಯಲ್ಲ. ನಾನು ಅಶಜಿಯಲ್ಲಿ ಹೇಳಿರುವ ರೀತಿ ನನ್ನ ತಾಯಿಗೆ ಅಪಘಾತವಾಗಿಲ್ಲ ಹಾಗೂ ಅವರಿಗೆ ಬೇರೆ ಕಾರಣದಿಂದ ಗಾಯವಾಗಿದ್ದು ಆದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿರುವ ರೀತಿ ವಾಹನ ನಂ.ಕೆಎ-65/ಇ-4666 ಅಪಘಾತದಲ್ಲಿ ಒಳಗೊಂಡಿಲ್ಲ ಹಾಗಾಗಿ ಎದುರುದಾರ ನಂ.2 ಕಂಪನಿಯವರು ನನಗೆ ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**